**ಮಹಾರಾಜ್:** ಹೌದು, ಹಾಗಾಯಿತು. ಈ 'ದರ್ಶನ'ವೆಂಬುದೇ ಒಂದು ದೊಡ್ಡ ಗೊಂದಲ. ಬ್ರಹ್ಮಜ್ಞಾನವಾದ ಮೇಲೆ ಬ್ರಹ್ಮದರ್ಶನವಾಗುವುದಿಲ್ಲವೆ? ಇಷ್ಟದೇವತೆಯ ದರ್ಶನವಾಯಿತೆಂದರೆ, ಕಣ್ಣಿನಿಂದ ನೋಡುವುದೇ? ಕಣ್ಣಿನ ಮೂಲಕ ನೋಡುವಂಥದಾಗಿದ್ದರೆ ಎಲ್ಲರೂ ನೋಡುತ್ತಿದ್ದರು. ಕಣ್ಣಿನ ಮೂಲಕವಲ್ಲ, ಬುದ್ಧಿ ಶುದ್ಧವಾದಾಗ ದರ್ಶನ ವುಂಟಾಗುವುದು. ಅಂತಹ ಶುದ್ಧ ಬುದ್ಧಿ ನಮಗೆಲ್ಲರಿಗೂ ಇಲ್ಲ. ಆ ಬುದ್ಧಿ ಹೊಳೆದಾಗ, ನಮ್ಮ ದೃಷ್ಟಿ ಬೇರೆಯೇ ಆಗಿಬಿಡುತ್ತದೆ.

**ಪ್ರಶ್ನೆ:** ಶಂಕರಾಚಾರ್ಯರಿಂದ ಪ್ರತಿಷ್ಠಾಪಿತವಾದ ಅದ್ವೈತವಾದದಲ್ಲಿ ಮಾಯಾತತ್ತ್ವವನ್ನು ಚೆನ್ನಾಗಿ ಸ್ಥಾಪನೆ ಮಾಡಲಾಗಿದೆ. ಅದೇ ಸಂಪ್ರದಾಯದಲ್ಲಿ ಬಂದ ತೋತಾಪುರಿಗೆ ಇದರ ಬಗ್ಗೆ ತಿಳಿದಿರಲಿಲ್ಲವೆ?

**ಮಹಾರಾಜ್:** ಅಯ್ಯಾ! ಮಾಯೆ ಎಂದರೆ ಮಿಥ್ಯೆ ಎಂದು ಹೇಳುತ್ತಾರೆ. ಅದನ್ನು ಪ್ರತಿಷ್ಠಿಸುವುದು ಎಲ್ಲಿ ಬಂತು?

**ಪ್ರಶ್ನೆ:** ಮಾಯೆಗೆ ಮಿಥ್ಯೆ ಎಂದು ಹೇಳುವುದು ತಿಳಿದ ವಿಷಯವೆ, ಅದನ್ನೇ ಶಂಕರಾಚಾರ್ಯರು ಪುನಃ ಪುನಃ ಹೇಳುತ್ತಾರೆ. ಅದೇ ಸಂಪ್ರದಾಯದಿಂದ ಬಂದ ತೋತಾಪುರಿಗೆ ಅದು ತಿಳಿಯಲಿಲ್ಲವೆ?

**ಮಹಾರಾಜ್:** ಮಾಯೆಯಿತ್ತು, ಆದರೆ ಮಾಯೆಯ ಈ ರೀತಿಯ ಪ್ರಭಾವ ಆತನಿಗೆ ತಿಳಿದಿರಲಿಲ್ಲ.

**ಪ್ರಶ್ನೆ:** ಮಾಯೆ ಮಿಥ್ಯೆ ಎಂಬುದನ್ನು ತಿಳಿದಿದ್ದ.

**ಮಹಾರಾಜ್:** ಅದಷ್ಟನ್ನು ತಿಳಿದಿದ್ದ.

**ಪ್ರಶ್ನೆ:** ಮಾಯೆಯ ಪ್ರಭಾವವನ್ನು ಅವನು ಸ್ವೀಕಾರ ಮಾಡುತ್ತಿರಲಿಲ್ಲ. ಅವನು ಶಕ್ತಿಯನ್ನು ಒಪ್ಪುತ್ತಿರಲಿಲ್ಲ ಅಂದರೆ, ಈಶ್ವರ ಸಗುಣ, ಸಾಕಾರ ರೂಪ ಆಗಲು ಸಾಧ್ಯ ಎಂಬುದನ್ನು ಅವನು ಸ್ವೀಕರಿಸಲಿಲ್ಲವೆ?

**ಮಹಾರಾಜ್:** ಸಾಕಾರವಲ್ಲ, ಸಗುಣವೆಂದು ಹೇಳು. ಗುಣವನ್ನು ಒಪ್ಪದಿದ್ದರೆ ಆತನ ಜಗದ್ವ್ಯಾಪಾರ ಹೇಗೆ ನಡೆಯುತ್ತದೆ? ಗುಣದ ಆರೋಪವನ್ನು ಮಾಡದೆ ವ್ಯವಹಾರ ಸಾಧ್ಯವಿಲ್ಲ, ಆದರೆ ಬ್ರಹ್ಮಜ್ಞಾನಿಗೆ ಇದು ಮಿಥ್ಯೆ ಎಂಬ ಅರಿವು ಇರುತ್ತದೆ. ಮಿಥ್ಯಾತ್ವದ ಜ್ಞಾನವಿರುತ್ತದೆ. ವ್ಯವಹಾರ ಮಾಡುತ್ತನಾದರೂ ಅದು ಮಿಥ್ಯೆ ಎಂಬ ಅರಿವಿರುತ್ತದೆ. ಈ ವ್ಯವಹಾರದ ಪ್ರಭಾವ ಹೇಗಿರುತ್ತದೆಂದರೆ: ಶ್ರೀರಾಮಚಂದ್ರ ಅವತಾರ ಪುರುಷ; ಆದರೆ ಸೀತೆಯನ್ನು ಅಪಹರಿಸಿದಾಗ ಹೃದಯ ಬಿರಿಯುವಂತೆ ಅತ್ತ. ಶ್ರೀರಾಮಕೃಷ್ಣರು ಅವತಾರ ಪುರುಷರು; ಅಕ್ಷಯನೆಂಬ ಹುಡುಗ ತೀರಿಕೊಂಡಾಗ ಅಳುತ್ತ, 'ಅಂಗವಸ್ತ್ರ ಹಿಂಡಿದ ಹಾಗೆ ನನ್ನ ಜೀವ ಹಿಂಡಿದಂತಾಗುತ್ತಿದೆ' ಎಂಬಂತೆ ಅನುಭವಿಸಿದರು. ಮಾಯೆಯ ಪ್ರಭಾವಕ್ಕೆ ಅನುಸಾರವಾಗಿ ವ್ಯವಹಾರವಿರುತ್ತದೆ. ನಾವು ವಿಚಾರ ಮಾಡುವಾಗ ಕೇವಲ ಒಂದೇ ದೃಷ್ಟಿಯಿಂದ ತತ್ತ್ವವಿಚಾರ ಮಾಡುತ್ತೇವೆ. ಇನ್ನೂ ಹಲವು ದೃಷ್ಟಿಗಳಿವೆ ಎಂಬುದನ್ನು ನಾವು ಗಮನಿಸುವುದಿಲ್ಲ. **'ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ'** ಎನ್ನಲಾಗಿದೆ. 'ಅವನು (ಬ್ರಹ್ಮನು) 'ಅನೇಕವಾಗುತ್ತೇನ' ಎಂದು ಯೋಚಿಸಿದ. ಅನೇಕವಾಗುತ್ತೇನೆಂದರೆ, ಆತನಿಂದ ಅನೇಕವಾಗಲು ಸಾಧ್ಯ ಎಂದರ್ಥ. ಅಷ್ಟೇ ಅಲ್ಲ, ಆತ ಅಜ್ಞಾನವೂ ಆಗಬಲ್ಲ, ಕೋಪಿಷ್ಠನಾಗಬಲ್ಲ, ಇನ್ನೇನು ಬೇಕಾದರೂ ಆಗಬಲ್ಲ. ಇಲ್ಲೊಂದು ಪ್ರಶ್ನೆ ಏಳುತ್ತದೆ, ಅವನು ಹೀಗೆಲ್ಲ ಆಗಬಲ್ಲನೆಂದರೆ ಅವನಿಗೂ ಸಾಮಾನ್ಯ ಜನರಿಗೂ ಏನು ವ್ಯತ್ಯಾಸ? ವ್ಯತ್ಯಾಸವಿದು: ಇದೆಲ್ಲ ಮಿಥ್ಯೆ ಎಂಬ ಅರಿವು ಅವನಿಗಿದ್ದೇ ಇರುತ್ತದೆ. ಅದು ಜಾಗೃತವಾಗಿರುತ್ತದೆ. ದೇಹಧಾರಣೆ ಮಾಡಿದ ಮೇಲೆ ಅದಕ್ಕೆ ದಂಡ ತೆರಲೇಬೇಕಾಗುತ್ತದೆ. ಜ್ಞಾನಿ ಪ್ರಜ್ಞಾಪೂರ್ವಕ ಅನುಭವಿಸುತ್ತಾನೆ. ಮೂರ್ಖ ಗೋಳಿಡುತ್ತ ಅನುಭವಿಸುತ್ತಾನೆ. ಜ್ಞಾನಿ ಅರಿತು ಪ್ರಾರಬ್ಧವನ್ನು ಅನುಭವಿಸುತ್ತಾನೆ. ಅಜ್ಞಾನಿಯು ಬಹಳ ಕಷ್ಟದಿಂದ ಅನುಭವಿಸುತ್ತಾನೆ.

**ಪ್ರಶ್ನೆ:** 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿದೆ, ಸ್ವಾಮೀಜಿ ಹರಮೋಹನನಿಗೆ ಹಾತಿ (ಆನೆ) ನಾರಾಯಣ-ಮಾವುತ ನಾರಾಯಣ ಕಥೆಯನ್ನು ಏಳು ದಿನಗಳ ಕಾಲ ಅರ್ಥೈಸಿ ಹೇಳಿದರು, ಅಂತ. ಇಲ್ಲಿ ಸ್ವಾಮೀಜಿಯವರ ಇಂಗಿತವೇನಿತ್ತು?

**ಮಹಾರಾಜ್:** ಸ್ವಾಮೀಜಿ ಏಳು ದಿನಗಳವರೆಗೆ ಆ ಕಥೆಯ ಅಂತರಾರ್ಥವನ್ನು ವಿವರಿಸಿ ಹೇಳಿದ್ದರು. ನನ್ನಿಂದ ಅದು ಸಾಧ್ಯವೆ?

**ಪ್ರಶ್ನೆ:** ಏಳುದಿನ ಅಲ್ಲದಿದ್ದರೆ ಒಂದು ದಿನದ ಮಟ್ಟಿಗಾದರೂ ಸಾಧ್ಯ.

**ಮಹಾರಾಜ್:** ಮಾವುತ ನಾರಾಯಣ ಒಬ್ಬನಿಗೆ ಹೇಳುತ್ತಾನೆ, 'ದಾರಿಬಿಡು, ದಾರಿಬಿಡು' ಅಂತ. ಆದರೆ ಆ ವ್ಯಕ್ತಿ ದಾರಿಯಿಂದ ಸರಿಯಲಿಲ್ಲ. ಆತ ಯೋಚಿಸಿದ, ಆನೆ ಕೂಡ ನಾರಾಯಣನೇ ಅಲ್ಲವೆ? ಆನೆ ನಾರಾಯಣನೇ ಆಗಿರಬಹುದು, ಆದರೆ ಮಾವುತನೂ ಅವನೇ ಅಲ್ಲವೆ? ಮಾವುತ ನಾರಾಯಣನ ಮಾತನ್ನು ಏಕೆ ಕೇಳಬಾರದು? ಅಂದರೆ ಸರ್ವತ್ರ ನಾರಾಯಣನ ದರ್ಶನವಾದರೂ, ಎಲ್ಲರೊಂದಿಗೆ ಒಂದೇರೀತಿ ವ್ಯವಹರಿಸಲು ಆಗುವುದಿಲ್ಲ. ಠಾಕೂರರು ಇನ್ನೊಂದು ಉಪಮೆ ಕೊಡುತ್ತಾರೆ. ಕೆಲವು ಬಗೆಯ ನೀರಿನಿಂದ ಕೈಕಾಲು ತೊಳೆಯಬಹುದು, ಇನ್ನು ಕೆಲವು ನೀರಿನಲ್ಲಿ ಸ್ನಾನ ಮಾಡಬಹುದು, ಕೆಲವು ಬಗೆಯ ನೀರನ್ನು ಕುಡಿಯಬಹುದು. ಹೀಗೆ ನೀರಿನಲ್ಲಿಯೂ ಭೇದವಿದೆ. ಎಲ್ಲವೂ ನಾರಾಯಣನೇ ಆಗಿದ್ದರೂ, ಎಲ್ಲರೊಡನೆ ಒಂದೇರೀತಿ ವ್ಯವಹರಿಸಲಾಗದು.

**ಪ್ರಶ್ನೆ:** ಅಂದರೆ ಒಬ್ಬೊಬ್ಬ ನಾರಾಯಣನ ಹತ್ತಿರ ಒಂದೊಂದು ರೀತಿ ವ್ಯವಹರಿಸಬೇಕಾಗುತ್ತದೆ.

**ಮಹಾರಾಜ್:** ಹೌದು.

**ಪ್ರಶ್ನೆ:** ಅಂದರೆ, ಭೇದಬುದ್ಧಿ, ನಾರಾಯಣ ಬುದ್ಧಿಗಳು ಒಟ್ಟಿಗೇ ಇರುತ್ತವೆಯೆ?

**ಮಹಾರಾಜ್:** ಯಾಕಿರಬಾರದು? ನೀನು ಒಂದು ಸಲ ಕೆಂಪು ಅಂಗಿ ಹಾಕುತ್ತೀಯಾ, ಇನ್ನೊಂದು ಸಲ ಹಸಿರು ಅಂಗಿ, ಅಥವಾ ಹಳದಿ ಅಂಗಿ ತೊಡುತ್ತೀಯಾ. ಆಗ ನೀನು ಬದಲಾಗುತ್ತೀಯಾ? ನೀನು ನೀನಾಗಿಯೇ ಇರುತ್ತೀಯೆ. ವ್ಯವಹಾರಭೇದ ಉಳಿಯಿತು, ಆದರೆ ಸ್ವರೂಪ ಒಂದೇ ಆಗಿದೆ. ಭಾಗವತದಲ್ಲಿ ಒಂದು ಶ್ಲೋಕವಿದೆ.

> **ತ್ವತ್ತೋಽಸ್ಯ ಜನ್ಮಸ್ಥಿತಿ ಸಂಯಮಾನ್ ವಿಭೋ**
> **ವದಂತ್ಯನೀಹಾದಗುಣಾದವಿಕ್ರಿಯಾತ್ ।**
> **ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ**
> **ತ್ವದಾಶ್ರಯತ್ವಾದುಪಚರ್ಯತೇ ಗುಣೈಃ ॥** *(೧೦.೩.೧೮)*

''ಹೇ ವಿಭೋ, ನೀನು ಬಹುರೂಪಧಾರಿ, ನಿನ್ನಿಂದಲೇ ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಾಗುತ್ತವೆ. ಆದರೆ ನೀನು ನಿರ್ಗುಣ, ನಿಷ್ಕ್ರಿಯ. ಆದರೂ ಇವುಗಳೇಕೆ ನಿನ್ನ ಮೂಲಕ ನಡೆಯುತ್ತವೆ? ಉತ್ತರ: ಅವು ನಿನ್ನಿಂದ ನಡೆಯುತ್ತಿಲ್ಲ, ಗುಣಗಳ ಮೂಲಕ ನಡೆಯುತ್ತವೆ. ಈ ಗುಣಗಳು ನಿನ್ನ ಆಶ್ರಯ ಪಡೆದದ್ದರಿಂದ ಈ ಗುಣಗಳ ಕ್ರಿಯೆ ನಿನ್ನ ಮೇಲೆ ಆರೋಪಿತವಾಗಿದೆ. ಹೀಗಾಗಿ ಬ್ರಹ್ಮ ಮತ್ತು ಈಶ್ವರರು ಭಿನ್ನರಲ್ಲ. ಈಶ್ವರನ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳೆಲ್ಲವೂ ಬ್ರಹ್ಮನ ಮೇಲೆಯೇ ಆರೋಪಿತವಾಗಿವೆ.'' ✶

# ಯೋಗವಾಸಿಷ್ಠದ ಕಥೆಗಳು

**ಸ್ವಾಮಿ ವೀರೇಶಾನಂದ**

**ಕಥಾಗುಚ್ಛ – ೫**



## ಇಂದ್ರ ಮತ್ತು ಅಹಲ್ಯೆಯ ಕಥೆ

*(**ಗಮನಿಸಿ:** ವಾಲ್ಮೀಕಿ ರಾಮಾಯಣದಲ್ಲಿ ಬರುವ ಇಂದ್ರ ಅಹಲ್ಯೆಯರ ಕಥೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ.)*

ವಸಿಷ್ಠರು ರಾಮಚಂದ್ರನಿಗೆ ಉಪದೇಶ ಮಾಡುತ್ತಿದ್ದಾರೆ: ಓ, ಕಮಲಲೋಚನನಾದ ರಾಮಚಂದ್ರ, ಮನಸ್ಸು ಆತ್ಮದ ಅರಿವನ್ನು ನಾಶಪಡಿಸುತ್ತದೆ. ಈ ಜಗತ್ತನ್ನು ಸೃಷ್ಟಿಸುವುದು ಮನಸ್ಸೇ. ಮನಸ್ಸಿನ ಕಾರ್ಯವೇ ಜಗತ್ತಿನ ಕಾರ್ಯವೆನಿಸಿಕೊಳ್ಳುತ್ತದೆ. ದೈಹಿಕ ಚಟುವಟಿಕೆಗಳು ಕ್ರಿಯೆಗಳೇ ಅಲ್ಲ ಎಂದು ಹೇಳಬೇಕು. ಏಕೆಂದರೆ ಅವೆಲ್ಲವೂ ಮನಸ್ಸಿನ ವಿಕಾರಗಳು ಮಾತ್ರವೇ. ಮನಸ್ಸಿನ ಅದ್ಭುತ ಶಕ್ತಿಯನ್ನು ಬ್ರಹ್ಮ ಮಾತ್ರ ಅರಿತುಕೊಳ್ಳಬಲ್ಲನು. ಈ ದೇಹವೆಂಬುದು ಮನಸ್ಸು ತನ್ನ ಕಾರ್ಯವನ್ನು ಗೈಯುವುದಕ್ಕೆ ಮಾಡಿಕೊಂಡ ಪಡಿಯಚ್ಚು ಎಂದು ಹೇಳಬಹುದು. ಮನಸ್ಸು ದೇಹವನ್ನು ಚಿಂತಿಸುತ್ತ ದೇಹವೇ ಆಗಿಬಿಡುವುದು. ನಂತರ ದೇಹದಲ್ಲಿ ಬಂಧಿತನಾಗಿ, ಈ ದೇಹದ ಮೂಲಕ ಹಲವಾರು ರೀತಿಯ ನೋವುಗಳನ್ನು ಕಷ್ಟಗಳನ್ನೂ ಅನುಭವಿಸುವುದು. ಸರ್ವವ್ಯಾಪಿಯಾದ ಆತ್ಮವಸ್ತುವಿನೊಡನೆ ತನ್ನನ್ನು ತಾದಾತ್ಮ್ಯಗೊಳಿಸಿಕೊಂಡವನು ಮಾತ್ರವೇ ದೇಹದ ಸಂಕಷ್ಟಗಳಿಂದ ಪಾರಾಗಬಲ್ಲನು. ಅವನು ಮಾತ್ರವೇ 'ತಾನು ದೇಹವಲ್ಲ' ಎಂಬ ನಿಜವಾದ ಜ್ಞಾನವನ್ನು ಪಡೆದುಕೊಳ್ಳಬಲ್ಲನು. ಇಂದ್ರ ಮತ್ತು ಅಹಲ್ಯೆಯರು ಅಂಥ ದೈಹಿಕ ಬವಣೆಯಿಂದ ಸಂಪೂರ್ಣವಾಗಿ ಪಾರಾಗಿದ್ದರು.

ರಾಮ ಪ್ರಶ್ನಿಸಿದ : ಪೂಜ್ಯ ಗುರುಗಳೇ, ಈ ಇಂದ್ರ ಯಾರು? ಈ ಅಹಲ್ಯೆ ಎಂಬುವವಳು ಯಾರು? ಅವರಿಬ್ಬರ ಬಗ್ಗೆ ತಿಳಿದುಕೊಳ್ಳಬೇಕೆಂದು ನನಗೆ ಬಹಳ ಕಾತರ ಉಂಟಾಗಿದೆ. ವಸಿಷ್ಠರು ಅವರಿಬ್ಬರ ಕಥೆಯನ್ನು ಹೇಳಲಾರಂಭಿಸಿದರು:

ಬಹಳ ದಿನಗಳ ಹಿಂದೆ ಮಗಧ ರಾಜ್ಯವನ್ನು ಇಂದ್ರದ್ಯುಮ್ನ ಎಂಬ ರಾಜನು ಆಳುತ್ತಿದ್ದನು. ಅವನಿಗೆ ಅಹಲ್ಯೆ ಎಂಬ ಹೆಂಡತಿಯಿದ್ದಳು. ಆ ಊರಿನಲ್ಲಿಯೇ ಇಂದ್ರ ಎಂಬ ಹೆಸರಿನ ಯುವಕನಿದ್ದನು. ರಾಣಿಗೆ ಅವನ ಮೇಲೆ ಆಕರ್ಷಣೆ ಉಂಟಾಯಿತು. ಅವಳು ಅವನೊಡನೆ ಸಂಗ ಬೆಳೆಸಿದಳು. ಈ ಸಮಾಚಾರ ರಾಜನಿಗೆ ಮುಟ್ಟಿತು. ಅವನಿಗೆ ತುಂಬ ಕೋಪ ಬಂತು. ಚಳಿಗಾಲದ ಸಮಯ ಅದು. ಕೊರೆಯುತ್ತಿರುವ ನೀರಿನಲ್ಲಿ ಇಬ್ಬರನ್ನೂ ಮುಳುಗಿಸಿಬಿಡಿ ಎಂದು ಆಜ್ಞೆಯಿತ್ತನು. ಹಾಗೆಯೇ ಮಾಡಲಾಯಿತು. ಆದರೆ ಇಬ್ಬರೂ ನಗುನಗುತ್ತಲೇ ಇದ್ದರು. ಆನಂದಭಾವದಲ್ಲಿ ಮುಳುಗಿಹೋಗಿದ್ದರು.

ನಂತರ ಬೆಂಕಿಯ ಮೇಲೆ ಇಟ್ಟಿದ್ದ ದೊಡ್ಡ ಬಾಣಲೆಯಲ್ಲಿ ಅವರನ್ನು ಬಿಸುಡಲಾಯಿತು. ಅಲ್ಲಿಯೂ ಅವರಿಗೆ ಏನೂ ಆಗಲಿಲ್ಲ. ಅವರಿಬ್ಬರೂ ರಾಜನಿಗೆ ಹೇಳಿದರು: ರಾಜನೇ, ನಾವಿಬ್ಬರೂ ಮತ್ತೊಬ್ಬರನ್ನು ಚಿಂತಿಸುತ್ತ ಆನಂದದಿಂದ ಇದ್ದೇವೆ. ನಮಗೆ ಯಾವ ನೋವೂ ಉಂಟಾಗುತ್ತಿಲ್ಲ. ತದನಂತರ ಅವರಿಬ್ಬರನ್ನೂ ಆನೆಯ ಕಾಲುಗಳಿಂದ ತುಳಿಸಲಾಯಿತು. ಹೀಗಾದರೂ ಅವರಿಗೆ ಏನೂ ಆಗಲಿಲ್ಲ. ಅವರು ಹೇಳಿದರು: 'ಓ ರಾಜ, ನಾವಿಬ್ಬರೂ ಪರಸ್ಪರರ ಚಿಂತನೆಯಲ್ಲಿ ಆನಂದವಾಗಿದ್ದೇವೆ.' ಅನಂತರ ರಾಜಭಟರು ಅವರನ್ನು ಕಬ್ಬಿಣದ ಸಲಾಕೆಗಳಿಂದಲೂ, ಸರಪಳಿಗಳಿಂದಲೂ ಸಿಕ್ಕಾಪಟ್ಟೆ ಹೊಡೆದರು; ಇದಲ್ಲದೆ ಸುತ್ತಿಗೆಯಿಂದ ಬಾರಿಸಿದರು. ಇಷ್ಟಾದರೂ ಅವರು ಸ್ವಲ್ಪ ಕೂಡ ನೋವಿನ ಚಿಹ್ನೆಯನ್ನು ತೋರಗೊಡಲಿಲ್ಲ. ಅವರು ಸುಮ್ಮನೆ ನಗುತ್ತಿದ್ದರು; ಆನಂದಮಯರಾಗಿದ್ದರು.

ರಾಜನಿಗೆ ಅತ್ಯಾಶ್ಚರ್ಯವಾಯಿತು. ನಿಮಗೆ ಇಷ್ಟೊಂದು ದೈಹಿಕ ಹಿಂಸೆಯನ್ನು ಕೊಟ್ಟರೂ ನೀವಿಬ್ಬರೂ ಕಿಂಚಿತ್ತೂ ನೋವನ್ನು ಅನುಭವಿಸುತ್ತಿಲ್ಲವಲ್ಲ! ಅದು ಹೇಗೆ ಸಾಧ್ಯ? ಎಂದು ಅವರನ್ನು ಕೇಳಿದನು.

ಅದಕ್ಕೆ ಅವರಿಬ್ಬರೂ ಹೀಗೆ ಉತ್ತರಿಸಿದರು: ರಾಜನೇ, ಯಾವ ಬಗೆಯ ಚಿತ್ರಹಿಂಸೆಯೂ ನಮ್ಮನ್ನು ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ನಮ್ಮಿಬ್ಬರ ಮುಂದಿರುವ ಜಗತ್ತು ಏನು ಗೊತ್ತೆ? ನಮ್ಮಿಬ್ಬರ ಆಕಾರಗಳು ಮಾತ್ರ. ಇಡೀ ಜಗತ್ತೇ ನಮ್ಮಿಬ್ಬರಿಂದ ತುಂಬಿಕೊಂಡಿರುವ ಹಾಗೆ ನಾವು ಕಾಣುತ್ತಿದ್ದೇವೆ. ಈ ಜಗತ್ತಿನಲ್ಲಿರುವ ಎಲ್ಲ ಆಕಾರಗಳಲ್ಲೂ, ಎಲ್ಲ ಸ್ವರೂಪಗಳನ್ನೂ ನಮ್ಮನ್ನೇ ನಾವು ಕಾಣುತ್ತಿದ್ದೇವೆ. ಹೀಗಾಗಿ ನಮ್ಮಿಬ್ಬರ ಹೊರತು ಇನ್ನೇನನ್ನೂ ನಾವು ಈ ಜಗತ್ತಿನಲ್ಲಿ ಕಾಣುತ್ತಲೇ ಇಲ್ಲ. ಇದಲ್ಲದೆ ನಾವು ಆನಂದವನ್ನು ಪೂರ್ಣವಾಗಿ ಅನುಭವಿಸುತ್ತಿದ್ದೇವೆ. ಹೀಗಾಗಿ ನಮಗೆ ನಮ್ಮ ಶರೀರಗಳ ಅರಿವೇ ಇಲ್ಲ. ಹೀಗಾಗಿ ನಾವು ಯಾವ ನೋವನ್ನೂ ಅನುಭವಿಸುತ್ತಿಲ್ಲ. ನಮ್ಮ ದೇಹಗಳನ್ನು ತುಂಡುತುಂಡಾಗಿ ಮಾಡಿದರೂ ನಮಗೆ ಸ್ವಲ್ಪವೂ ನೋವುಂಟಾಗುವುದಿಲ್ಲ.

ಓ ರಾಜನೇ, ಮನಸ್ಸು ಒಂದು ವಸ್ತುವಿನ ಮೇಲೆ ಪೂರ್ತಿಯಾಗಿ ನಿಂತಿದ್ದರೆ, ಅದಕ್ಕೆ ಯಾವ ನೋವಿನ ಭಾವನೆಯೂ ಉಂಟಾಗದು. ಮನಸ್ಸು ಒಂದು ಸಂಗತಿಯಲ್ಲಿ ಸಂಪೂರ್ಣವಾಗಿ ಮಗ್ನವಾಗಿದ್ದರೆ, ದೇಹದ ನೋವುಗಳನ್ನು ಮತ್ತು ತೊಂದರೆಗಳನ್ನು ಗಮನಿಸುವವರಾರು? ಯಾರೂ ಇಲ್ಲ. ಮನಸ್ಸು ದೇಹದಲ್ಲಿ ತಾದಾತ್ಮ್ಯ

ಗೊಂಡಾಗ ಮಾತ್ರ ದೇಹದ ನೋವುಗಳ ಜೊತೆಗೆ ತನ್ನನ್ನು ಒಂದಾಗಿಸಿಕೊಳ್ಳುತ್ತದೆ. ಬೇರೆಲ್ಲಿಯೋ ಸಂಪೂರ್ಣವಾಗಿ ತಾದಾತ್ಮ್ಯ ಹೊಂದಿದ್ದರೆ, ದೇಹದ ಕಡೆ ಗಮನ ಹರಿಸುವುದಕ್ಕೆ ಅದಕ್ಕೆ ಆಗುವುದೇ ಇಲ್ಲ, ಅಲ್ಲವೆ?

ಮನಸ್ಸೆಂದರೆ ತಾನೇ ಏನು? ನೋವನ್ನು ಅನುಭವಿಸುವುದಕ್ಕೆ ಅದೊಂದು ಸಾಧನ ಅಷ್ಟೇ. ಈಗ ನಮ್ಮ ಮನಸ್ಸು ನಾವು ಇಷ್ಟಪಡುವ ಸಂಗತಿಯ ಮೇಲೆ (ಅಂದರೆ ಪರಸ್ಪರರ ಮೇಲೆ) ಸಂಪೂರ್ಣವಾಗಿ ನೆಲೆನಿಂತಿದೆ. ಹೀಗಾಗಿ ಅದಕ್ಕೆ ಹೇಗೆ ತಾನೇ ನೋವು ತಟ್ಟಲು ಸಾಧ್ಯ? ನಮ್ಮ ಪ್ರಿಯವಸ್ತುವಿನ ಮೇಲಿಟ್ಟ ನಮ್ಮ ಮನಸ್ಸನ್ನು ಜಗತ್ತಿನ ಯಾವುದೇ ಶಕ್ತಿಯೂ ಬೇರೆ ಕಡೆ ಸೆಳೆಯಲು ಸಾಧ್ಯವಿಲ್ಲ.

ಮಹಾರಾಜ, ಎಲ್ಲ ದೇಹಗಳೂ ಉಂಟಾಗುವುದು ಮನಸ್ಸಿನಿಂದಲೇ. ಎಲ್ಲವನ್ನೂ ಮಾಡುವುದು ಮನಸ್ಸೇ. ಒಂದು ರೀತಿಯಲ್ಲಿ ಹೇಳುವುದಾದರೆ, ಮನಸ್ಸೇ ಪರಮೋಚ್ಚ ದೇಹ. ಈ ದೇಹ ನಾಶವಾದರೂ ಮನಸ್ಸು ತನಗೆ ಇಷ್ಟವಾದ ರೀತಿಯಲ್ಲಿ ಹೊಸದೇಹವನ್ನು ಪಡೆದುಕೊಳ್ಳುತ್ತದೆ. ಆತ್ಮಜ್ಞಾನದಿಂದ ಮಾತ್ರವೇ ಮನಸ್ಸು ಸಂಪೂರ್ಣವಾಗಿ ನಾಶವಾಗಬಲ್ಲುದು. ಆಗ ಮಾತ್ರ ಹೊಸ ದೇಹಗಳ ಉತ್ಪತ್ತಿ ಸಾಧ್ಯವಾಗುವುದಿಲ್ಲ.

ರಾಜನಿಗೆ ಅವರ ಮಾತುಗಳ ಅಂತರಾರ್ಥದ ಅರಿವಾಯಿತು. ಮುನಿ ಭರತನು ರಾಜನ ಪಕ್ಕದಲ್ಲಿಯೇ ಕುಳಿತಿದ್ದನು. ಪರಸ್ಪರ ಇಬ್ಬರೂ ಕಾಮಾಸಕ್ತರಾಗಿದ್ದರೂ ಅರಿವಿನ ಮಾತುಗಳನ್ನೇ ಆಡಿದ್ದಾರೆ ಎಂದು ಅವನೂ ಮೆಚ್ಚುಗೆ ವ್ಯಕ್ತಪಡಿಸಿದನು. ಅವರಿಬ್ಬರೂ ಮುಕ್ತವಾಗಿ ಇರಲೆಂದು, ರಾಜನು ಅವರಿಬ್ಬರನ್ನೂ ತನ್ನ ರಾಜ್ಯದಿಂದ ವಿದೇಶಕ್ಕೆ ಬಹಿಷ್ಕರಿಸಿದನು.

ಈ ಕಥೆಯನ್ನು ಹೇಳಿದ ವಸಿಷ್ಠರು ರಾಮನಿಗೆ ಹೀಗೆ ಉಪದೇಶಿಸಿದರು: ಮಗೂ ರಾಮ, ಈ ದೇಹಕ್ಕೆ ಹಲವಾರು ಅಂಗಗಳಿವೆ. ಇವೆಲ್ಲವೂ ಸೇರಿ ಬರಿಯ ಮನಸ್ಸಲ್ಲದೆ ಬೇರೆಯಲ್ಲ. ಹಾಗೆಯೇ ಇಡೀ ಸೃಷ್ಟಿಯೂ ಕೂಡ ಮನಸ್ಸಲ್ಲದೆ ಬೇರೆಯಲ್ಲ. ಮನಸ್ಸು ನಾಶವಾದರೆ, ದೇಹ ಮತ್ತು ಜಗತ್ತು ಈ ಎರಡೂ ನಾಶವಾಗುವವು.

### ಮಗುವಿನ ಕಥೆ

ವಸಿಷ್ಠರು ಮುಂದುವರೆಸುತ್ತಿದ್ದಾರೆ: ರಾಮ, ನೀನು ನಿಜಕ್ಕೂ ಧೀರ. ಮಗೂ, ಮುನಿಯೊಬ್ಬನ ಮನಸ್ಸು ಬ್ರಹ್ಮವಸ್ತುವಿಗಿಂತ ಬೇರೆಯಾಗಿರಲಾರದು. ಅವಿದ್ಯೆ ಮತ್ತು ದೋಷಗಳಿಗೆ ಅಜ್ಞಾನಿಯ ಮನಸ್ಸೇ ಕಾರಣ. ಬ್ರಹ್ಮನಲ್ಲಿ ಅನೇಕ ಶಕ್ತಿಗಳಿವೆ, ಉದಾಹರಣೆಗೆ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಭೂಮಾಶಕ್ತಿ, ಅಕೃತಾಶಕ್ತಿ ಮುಂತಾದವು. ಪರಬ್ರಹ್ಮವು ಪರಿಪೂರ್ಣವಾದುದು, ಅವಿಕಾರಿಯಾದುದು. ಗಾಳಿಯಲ್ಲಿ ನಾವು ಕಾಣುವುದು ಆತನ ಚಲನ ಶಕ್ತಿ. ಕಲ್ಲಿನಲ್ಲಿ ಕಾಣುವುದು ಅವನ ಪೆಡುಸಿನ ಶಕ್ತಿ. ಬೆಂಕಿಯಲ್ಲಿ ಶಾಖ ಶಕ್ತಿ, ಆಕಾಶದಲ್ಲಿರುವುದು ಅವನ ಅವಕಾಶ ಶಕ್ತಿ. ನೀರಿನಲ್ಲಿರುವುದು ಅವನ ದ್ರವಶಕ್ತಿ. ಪವಿತ್ರಾತ್ಮರ ಹೃದಯಗಳಲ್ಲಿ ಕಾಣುವುದು ಅವನ ಆನಂದವೇ. ಯೋಗಿಗಳಲ್ಲಿ ಕಾಣುವುದು ಅವನ ಬಲವೇ. ಈ ಸೃಷ್ಟಿಯಲ್ಲಿ ಕಾಣಸಿಗುವ ಎಲ್ಲ ರೀತಿಯ ಸೃಜನಾತ್ಮಶಕ್ತಿಯೂ ಅವನದೇ. ಒಂದು ಕಲ್ಪದ ಕಡೆಯಲ್ಲಿ ಉಂಟಾಗುವ ಮಹಾಪ್ರಳಯದಲ್ಲಿ ಅವನ ಸಂಹಾರಶಕ್ತಿಯೂ ವ್ಯಕ್ತವಾಗುತ್ತದೆ.

ರಾಮ, ಒಂದು ಬೀಜದಲ್ಲಿ ದೊಡ್ಡ ಮರವೇ ಅಡಗಿರುವಂತೆ, ಎಲ್ಲವೂ ಬ್ರಹ್ಮನಲ್ಲಿಯೇ ಅಡಕವಾಗಿದೆ. ಅಂಥ ಬ್ರಹ್ಮವು ಏಕಮೇವ ಅದ್ವಿತೀಯವಾದುದು. ತನ್ನ ಮಾಯಾಶಕ್ತಿಯಿಂದ ಅದು ಬಹುರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಚಿಂತಿಸುವ ಕ್ರಿಯೆಯಲ್ಲಿ ಬ್ರಹ್ಮವು ತಾನಾಗಿಯೇ ಮನಸ್ಸಾಗಿ ಪರಿಣಮಿಸುತ್ತದೆ. ಅವಿದ್ಯೆಯೆಂಬ ಉಪಾಧಿಯ ಮೂಲಕ ಜೀವಾತ್ಮನಾಗಿ, ಮಾಯೆಯೆಂಬ ಉಪಾಧಿಯ ಮೂಲಕ ಈಶ್ವರನಾಗಿ, ವಿಕ್ಷೇಪಶಕ್ತಿಯ (ಮಾಯೆಯದೇ ಒಂದು ಬಗೆ) ಮೂಲಕ ವಿಶ್ವವಾಗಿ ಕಾಣಿಸಿಕೊಳ್ಳುವುದು ಆ ಪರಬ್ರಹ್ಮವೇ.

ರಾಮ, ಬಂಧನ ಮತ್ತು ಮುಕ್ತಿ – ಇವೆರಡೂ ಅಜ್ಞಾನಿಯ ಕಲ್ಪನೆಗಳಲ್ಲದೆ ಬೇರೆಯಲ್ಲ. ಆತ್ಮನಿಗೆ ಬಂಧನವಿದೆ ಎಂದು ಹೇಳುವುದು ತಪ್ಪು. ಏಕೆಂದರೆ ಆತ್ಮವು ನಿತ್ಯಮುಕ್ತವಾದುದು. ಹಾಗೆಯೇ ಆತ್ಮನಿಗೆ ಮುಕ್ತಿ ದೊರಕುವುದು ಎಂದು ಹೇಳುವುದೂ ಸರಿಯಲ್ಲ. ಏಕೆಂದರೆ ಆತ್ಮನು ಎಂದಿಗೂ ಮುಕ್ತನೇ. ಆದರೂ ಲೋಕದ ಜನರು ಅಜ್ಞಾನದಲ್ಲಿ ಮುಳುಗಿರುತ್ತಾರೆ. ಹೀಗಾಗಿ, ಒಬ್ಬಳು ತಾಯಿ ತನ್ನ ಮಗನಿಗೆ ಹೇಳಿದ ಅಡುಗೂಲಜ್ಜಿ ಕಥೆಯ ಹಾಗೆ ಇವೆಲ್ಲವೂ ನಿಜವೆಂದೇ ನಂಬಿಬಿಡುತ್ತಾರೆ.

ರಾಮ ಕೇಳಿದ: 'ಗುರುದೇವಾ, ದಯವಿಟ್ಟು ಆ ಕಥೆಯನ್ನು ಹೇಳಿ. ಕೇಳಬೇಕೆಂದು ಬಹಳ ಆಸಕ್ತಿಯುಂಟಾಗಿದೆ.' ವಸಿಷ್ಠರು ಕಥೆಯನ್ನು ಹೇಳಲಾರಂಭಿಸಿದರು:

ಒಂದು ಮನೆ. ಅಮ್ಮ, ಮಗು ಇಬ್ಬರೇ ಇದ್ದರು. ಮಗುವಿಗೆ ಕಥೆ ಕೇಳಬೇಕೆಂಬ ಹುಚ್ಚು, ತಾಯಿಯನ್ನು ಕಾಡಲಾರಂಭಿಸಿದ. ಕೊನೆಗೆ ತಾಯಿ ಕಥೆ ಹೇಳಲಾರಂಭಿಸಿದಳು:

ಒಂದಾನೊಂದು ಕಾಲದಲ್ಲಿ, ಶೂನ್ಯವೆಂಬ ನಗರದಲ್ಲಿ ಮೂರು ರಾಜಕುಮಾರರು ವಾಸಿಸುತ್ತಿದ್ದರು. ಅವರು ಮೂವರೂ ಧಾರ್ಮಿಕರು, ಗುಣಶೀಲರು, ಔದಾರ್ಯವಂತರು. ಅವರು ಮೂವರಲ್ಲಿ ಇಬ್ಬರು ಹುಟ್ಟೇ ಇರಲಿಲ್ಲ; ಮೂರನೆಯವನೋ ತನ್ನ ತಾಯಿಯ ಗರ್ಭವನ್ನು ಪ್ರವೇಶಿಸಿಯೇ ಇರಲಿಲ್ಲ. ಅವರು ಮೂವರೂ ಒಂದು ಯಾತ್ರೆ ಕೈಗೊಂಡರು. ಮಾರ್ಗಮಧ್ಯದಲ್ಲಿ ಆಕಾಶವೆಂಬ ಉದ್ಯಾನವನದಲ್ಲಿ ವಿಶ್ರಾಂತಿ ಪಡೆದರು. ಅಲ್ಲಿ ವಿವಿಧ ಬಗೆಯ ಹಣ್ಣುಗಳನ್ನು ತಿಂದರು. ಮೇಲುದಿಕ್ಕಿನೆಡೆಗೆ ತಮ್ಮ ಪ್ರಯಾಣವನ್ನು ಬೆಳೆಸಿದರು. ಬಹಳ ದೂರ ಹೋದ ಮೇಲೆ, ಮಧ್ಯಾಹ್ನದ ಸಮಯದ ವೇಳೆಗೆ, ಮೂರು ನದಿಗಳು ಕೂಡುವ ಸಂಗಮಸ್ಥಾನವೊಂದನ್ನು ಕಂಡರು. ಆ ನದಿಗಳು ವೇಗವಾಗಿ ಹರಿಯುತ್ತಿದ್ದವು; ಉಬ್ಬರದ ಅಲೆಗಳು ಅವುಗಳಲ್ಲಿ ಏಳುತ್ತಿದ್ದವು. ಆ ಮೂರು ನದಿಗಳಲ್ಲಿ ಎರಡರಲ್ಲಿ ನೀರೇ ಇರಲಿಲ್ಲ; ಮೂರನೆಯದರಲ್ಲಿ ಇದ್ದದ್ದು ಬರಿಯ ಮರಳು. ಅವ